ಶ್ರೀ ಕೆ. ವಿ. ಶಂಕರಗೌಡ.—ಹಾನ್ವಲ್‌ಗೆ ರಾತ್ರಿ ವೇಳೆ ಬಂದಿರಲಿಲ್ಲ. ಇವರು ಸೌಜನ್ಯತೆಯಿಂದ ವರ್ತಿಸಲಿಲ್ಲ ಎಂದು ಮಾತ್ರ ದೂರುಗಳು ಬಂದಿವೆ. ಇಂತಹ ದೂರುಗಳು ಬಂದಮೇಲೆ ಇಲ್ಲಿಗೆ ಹೋಗುವ ಹುಡಗರನ್ನು ಹೋಗಬೇಡಿ ಎಂದು ಹೇಳಲಾಯಿತು. ಮತ್ತು ವಿದ್ಯಾರ್ಥಿಗಳಿಗೆ ಇಲ್ಲಿಗೆ ಹೋಗಲು ಮತ್ತೆ ಅವಕಾಶ ಕೊಡಲಿಲ್ಲ.

(Some members stood up to put questions)

Mr. DEPUTY SPEAKER.—If the members desire to put supplementaries they may ask one by one. But the proceedings should not be disturbed.

Sri B. P. KADAM.—May I know what is the nature of the complaint lodged ?

Sri K. V. SHANKARA GOWDA.—The nature of the complaint was, he was discourteous in his behaviour.

ಶ್ರೀ ಬಿ. ಎನ್. ನಂಜೇಗೌಡ.—ಸೌಜನ್ಯತೆಯಿದ ವರ್ತಿಸಲಿಲ್ಲ ಎಂದು ಮಾನ್ಯ ಮಂತ್ರಿಗಳು ಇಲ್ಲಿ ಹೇಳುತ್ತಾ ತಿಳಿಸಿದರು. ಸೌಜನ್ಯತೆಯಿಂದ ವರ್ತಿಸಲಿಲ್ಲ ಎಂದು ಪೋಲೀಸಿನವರು ಇಲ್ಲಿ ಎನ್ ಕ್ವೈರಿ ಮಾಡಿರಲಿಲ್ಲವೇ ?

ಶ್ರೀ ಕೆ. ವಿ. ಶಂಕರಗೌಡ.—ಪೋಲೀಸಿನವರಿಗೆ ಮೊದಲು ದೂರು ಕೊಟ್ಟಮೇಲೆ ಅವರ ವಿಚಾರಣೆ ಮಾಡಿ ಅನಂತರ ಅದರ ವರದಿ ಬಂದಮೇಲೆ ಇವರಮೇಲೆ ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

1-00 P.M.

ಶ್ರೀ ಪಿ. ವಿ. ಐತಾಳ.—ಮುಖ್ಯ ಮುಂತ್ರಿಗಳಿಗೆ ಬಂದಿರುವ ಕಂಪ್ಲೇಂಟನ್ನು ಈ ಸಭೆಯ ಟೇಬಲ್‌ಮೇಲೆ ಇಡುತ್ತೀರಾ ?

Mr. DEPUTY SPEAKER.—It does not arise.

ಶ್ರೀ ಎಸ್. ಬಂಗಾರಪ್ಪ.—ಸೌಜನ್ಯ ರಹಿತವಾದುದು ಅಂದರೆ ಯಾವ ರೀತಿ ಹೇಗೆ ? ಈ ದೃಷ್ಟಿಯಿಂದ ಏನು ಕಂಪ್ಲೇಂಟ್ ಬಂದಿದೆ ? ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಏನು ಕ್ರಮ ತೆಗೆದು ಕೊಂಡಿದ್ದಾರೆ ? ಇದನ್ನು ತಾವು ತಿಳಿಸಬೇಕು ಎಂದು ಕೇಳುತ್ತೇನೆ.

ಶ್ರೀ ಕೆ. ವಿ. ಶಂಕರಗೌಡ.—ಪದೇ ಪದೇ ಅದೇ ಅದೇ ಪ್ರಶ್ನೆ ಕೇಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಯಾವ ರೀತಿ ಸೌಜನ್ಯ ರಹಿತ ಎನ್ನುವುದು, ಅದು ಯಾವ ರೀತಿ ಇತ್ತು ಇದನ್ನು ಸಭೆಗೆ ತಿಳಿಸಬೇಕು.

Mr. DEPUTY SPEAKER.—This question has been already answered The question Hour is over. Now Short Notice question No. 59.

SHORT NOTICE QUESTION AND ANSWER

Shifting of the Head quarters of the State Port Officer

29. Sri P. V. AITHAL (Surathkal).—

Will the Minister for Public Works be pleased to state :—

(*a*) whether the Government are considering the shifting of the Headquarters of the State Port Officer from Mangalore to Karwar, if so,

(SRI P. V. AITHAL)

the reasons therefor and the extra expenditure that would be incurred in the shifting;

(*b*) whether there is a move to form a separate Port Trust for Karwar Port and if so, the desirability of shifting the State Port Officers Headquarters to Karwar;

(*c*) whether there is sufficient accommodation at Karwar for the Office and quarters for the staff;

(*d*) whether the State Port Officer is a member of the Technical Advisory Committee of the Mangalore Harbour Project, if so, whether it is not desirable to have the State Port Officer's Headqaurters at Mangalore itself;

(*e*) since how long the post of the State Port Officer is vacant and the reasons for the same?

A.—**Sri VEERENDRA PATIL** (Minister for Public Works).—

(*a*) Yes. Even though orders were issued in 1964, the actual shifting did not take place for want of buildings at Karwar. Administratively it is more appropriate to have the headquarters of this Department at Karwar. The approximate extra expenditure would be:

(i) in connection with the transportation, etc., about Rs. 14,000 and,

(ii) construction of buildings Rs. 8.75 lakhs.

(*b*) A proposal in this regard is still under consideration.

(*c*) Certain accommodation is available for the office and the staff.

(*d*) (i) Yes.

(ii) Not necessarily.

(*e*) The post is not vacant. In-charge arrangement has been made.

ಶ್ರೀ ಪಿ. ವಿ. ಐತಾಳ್—ಸ್ವಾಮಿ, ಮಂಗಳೂರು ದೊಡ್ಡ ಬಂದರು ಆಗುತ್ತದೆ ಎಂದು ಪೇಪರ್‌ನಲ್ಲಿ ನೋಡಿದ್ದೇವೆ. ಇಂಥ ಸಂದರ್ಭದಲ್ಲಿ ಹಲವು ವರ್ಷಗಳಿಂದ ಮಂಗಳೂರಿನಲ್ಲಿ ಇರತಕ್ಕ ಸ್ಟೇಟ್ ಪೋರ್ಟ್ ಆಫೀಸರ್ ಇವರನ್ನು ಕಾರವಾರಕ್ಕೆ ಶಿಫ್ಟ್ ಮಾಡುವುದರಲ್ಲಿ ಏನು ಅರ್ಥ?

† ಶ್ರೀ ವೀರೇಂದ್ರ ಪಾಟೀಲ್.—1964 ರಲ್ಲಿ ಇದನ್ನು ನಿರ್ಣಯ ಮಾಡಿದೆ. ಮಂಗಳೂರು ಮೇಜರ್ ಪೋರ್ಟ್ ಆದರೂ ಕೂಡ ಪೋರ್ಟ್ ಆಫೀಸರರಿಗೆ ಅದು ಸಂಬಂಧವಿಲ್ಲ. ಮಂಗಳೂರಿಗೆ ಪೋರ್ಟ್ ಟ್ರಸ್ಟ್ ಇದೆ ಆದರ ಜ್ಯೂರಿಸಡಿಕ್ಷನ್ ಪೋರ್ಟ್ ಆಫೀಸರರಿಗೆ ಇಲ್ಲ, ಮಂಗಳೂರಿನಲ್ಲಿ ಅವರಿಗೆ ಏನೂ ಕೆಲಸವಿಲ್ಲ. ಹೊರಗಡೆ ಇರತಕ್ಕಂಥ ಪೋರ್ಟ್‌ಗಳ ಜ್ಯುರಿಸ್‌ಡಿಕ್ಷನ್ ಇರುವುದರಿಂದ ಕಾರವಾರ ಇದು ಉಚಿತ ಸ್ಥಳವಾಗಿದೆ ಅದು ಯೋಗ್ಯವಾಗಿದೆ. ಆದುದರಿಂದ ಅಲ್ಲಿ ಇರಬೇಕೆಂದು ವರ್ಗಾಯಿಸಿದ್ದೇವೆ.

ಶ್ರೀ ಪಿ. ವಿ. ಐತಾಳ.—ಸ್ಟಾಫ್ ಕ್ವಾರ್ಟರ್ಸ್ ಮತ್ತು ಕಟ್ಟಡ ತಯಾರಾಗಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ನಾಲ್ಕನೇ ಯೋಜನೆಯಲ್ಲಿ ಸ್ಟಾಫ್ ಕ್ವಾರ್ಟರ್ಸ್ ಮತ್ತು ಬಿಲ್ಡಿಂಗ್ ತಯಾರಾಗುತ್ತವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಂಗಳೂರಿನಿಂದ ಯಾವಾಗ ಟ್ರಾನ್ಸ್‌ಫರ್ ಮಾಡುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್—1964 ರಲ್ಲಿ ನಿರ್ಣಯ ಮಾಡಿದ್ದೇವೆ. ಆಗ್ಗೆ ಆಫೀಸ್ ಬಿಲ್ಡಿಂಗ್ ಸಿಕ್ಕಿರಲಿಲ್ಲ. ಇತ್ತೀಚೆಗೆ ಆಫೀಸ್ ಬಿಲ್ಡಿಂಗ್ ಮಾಡಿದೆ. ಆದುದರಿಂದ ಇದನ್ನು ವರ್ಗಾಯಿಸುತ್ತೇವೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಪೋರ್ಟ್ ಆಫೀಸರಿಗೆ ಕಾರವಾರದಲ್ಲಿ ಹೆಚ್ಚು ಕೆಲಸ ಇರುವುದೇನು ? ಮಂಗಳೂರಿನಲ್ಲಿ ಇಲ್ಲದ ಇರುವುದೇನು ? ಯಾವ ದೃಷ್ಟಿಯಿಂದ ಅವರನ್ನು ಮಂಗಳೂರಿನಿಂದ ಕಾರವಾರಕ್ಕೆ ಬದಲಾಯಿಸಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಮಂಗಳೂರಿನಲ್ಲಿ ಪೋರ್ಟ್ ಟ್ರಸ್ಟ್ ಇದೆ. ಇವರು ಪೋರ್ಟ್ ಆಫೀಸರ್ ಇದ್ದಾರೆ. ಪೋರ್ಟ್ ಟ್ರಸ್ಟ್‌ನಲ್ಲಿ ಡೆಪ್ಯುಟಿ ಕಮಿಷನರಿದ್ದಾರೆ ಮತ್ತು ಕೆಲವು ಖಾತೆಗಳಿಗೆ ಯವರಿದ್ದಾರೆ, ಅದಕ್ಕೆ ಒಬ್ಬ ಚೇರ್ಮನ್ ಇದ್ದಾರೆ. ಮಂಗಳೂರು ಪೋರ್ಟ್‌ನಲ್ಲಿ ಸ್ಟೇಟ್ ಪೋರ್ಟ್ ಆಫೀಸರ ಜೂರಿಸ್‌ಡಿಕ್ಷನ್ ಯಾವುದೂ ಇಲ್ಲ. ಅದಕ್ಕಾಗಿ ಮೈನರ್ ಪೋರ್ಟ್ಸ್ ನೋಡಿ ಕೊಳ್ಳಲು ಒಬ್ಬ ಆಫೀಸರ್ ಇದ್ದಾರೆ. ಇವರು ಕಾರವಾರದಲ್ಲಿದ್ದರೆ ಅದು ಒಳ್ಳೆಯ ಪೋರ್ಟ್ ಆಗಿದ್ದು ಅಲ್ಲಿ ಟ್ರಾಫಿಕ್ ಸಾಕಷ್ಟು ಹೆಚ್ಚಾಗಿರುವುದರಿಂದ ಕಾರವಾರದಲ್ಲಿ ಅವರು ಇರುವುದು ಒಳ್ಳೆಯದು ಎಂದು ಅಲ್ಲಿಗೆ ವರ್ಗಾಯಿಸಲಾಗಿದೆ.

ಶ್ರೀ ಎಂ. ಎಂ. ಜಾಲಿಸಟ್ಗಿ.—ಪೋರ್ಟ್ ಆಫೀಸರನ್ನು ಈ ವರ್ಷವೇ ಕಾರವಾರಕ್ಕೆ ತೆಗೆದು ಕೊಂಡು ಹೋಗುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್—ಇದೇ ವರ್ಷವೇ ತೆಗೆದುಕೊಂಡು ಹೋಗಬೇಕು ಎನ್ನುವ ಪ್ರಯತ್ನಗಳನ್ನು ಸರ್ಕಾರ ಮಾಡುತ್ತಿದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈ ಬಂದರು ಅಧಿಕಾರಿ ಹುದ್ದೆ ಯಾವಾಗಿನಿಂದ ಕಾಲ ಇದೆ, ಇಷ್ಟು ವರ್ಷದಿಂದ ಇನ್‌ಚಾರ್ಜ್ ಒಬ್ಬರಿಗೂ ಕೊಟ್ಟಿಲ್ಲ. ಅದಕ್ಕೆ ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ಮೊದಲು ಒಬ್ಬ ಪೋರ್ಟ್ ಆಫೀಸರಿದ್ದರು. ಅವರು ಬಿಟ್ಟು ಹೋದಮೇಲೆ ಆ ಪೋಸ್ಟ್ ಖಾಲಿ ಇದೆ. ಒಂದೆರಡು ಸಲ ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಹೇಳಿದ್ದೇವೆ. ಅದಕ್ಕೆ ಸರಿಯಾದ ಅಭ್ಯರ್ಥಿ ಸಿಗಲಾರದ್ದರಿಂದ ಖಾಲಿ ಇದೆ.

ಶ್ರೀ ಡಿ. ಎಸ್. ನಾಡಕರ್ಣಿ.—ಪೋರ್ಟ್ ಆಫೀಸ್ ಕೆಲಸದಲ್ಲಿ ನೌಕರರಲ್ಲಿ ಉತ್ತರ ಕನ್ನಡದವರು ಮತ್ತು ದಕ್ಷಿಣ ಕನ್ನಡದವರು ಎಷ್ಟೆಷ್ಟು ಜನರಿದ್ದಾರೆ ?

ಶ್ರೀ ವೀರೇಂದ್ರ ಪಾಟೀಲ್.—ಯಾವ ಯಾವ ಭಾಗದವರಿದ್ದಾರೆ, ಯಾವ ಯಾವ ಜಿಲ್ಲೆಯವರಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ.

ಶ್ರೀ ಪಿ. ವಿ. ಐತಾಳ್.—40 ಸಂಸಾರಗಳವರು ಇಲ್ಲಿ ಕೆಲಸ ಮಾಡುತ್ತಾರೆ. ಅವರಿಗೆ ವಾಸದ ಮನೆಗಳ ವ್ಯವಸ್ಥೆಯನ್ನು ಕಾರವಾರದಲ್ಲಿ ಮಾಡಿದ್ದೀರಾ, ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಸಾಧಾರಣವಾಗಿ ವಾಸದ ಮನೆಗಳ ವ್ಯವಸ್ಥೆಯನ್ನು ಮಾಡುವ ಜವಾಬ್ದಾರಿ ತೆಗೆದುಕೊಳ್ಳುವುದು ಬಹಳ ಕಷ್ಟವಾಗುತ್ತದೆ. ಆದಳಿತದ ಸೌಕರ್ಯದ ದೃಷ್ಟಿಯಿಂದ ನಾವು ಎಲ್ಲಿಗೆ ಕಳುಹಿಸುತ್ತೇವೆ ಅವರು ಅಲ್ಲಿ ಹೋಗಿ ಕೆಲಸ ಮಾಡಬೇಕಾಗುತ್ತದೆ.

ಶ್ರೀ ಬಿ. ಎಂ. ಇದಿನಬ್ಬ.—ಕಾರವಾರಕ್ಕೆ ಪೋರ್ಟ್ ಆಫೀಸರನ್ನು ಬದಲಾಯಿಸಿದರೆ ಅನಾವಶ್ಯಕ ವೆಚ್ಚವಾಗುತ್ತದೆ ಎನ್ನುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಮಂಗಳೂರಿನಲ್ಲಿ ಅವರಿಗೆ ಕೆಲಸವಿಲ್ಲ. ಕೆಲಸವಿಲ್ಲದೆ ಕೂಡಿಸಿ ಕೊಂಡರೆ ಆಗುವ ವೆಚ್ಚ ಅನಾವಶ್ಯಕವಾಗಿ ಆಗುತ್ತದೆ. ಎಲ್ಲಿ ಕೆಲಸವಿದೆ ಅಲ್ಲಿಗೆ ಕಳಿಸುತ್ತೇವೆ. ಕೆಲಸವಿಲ್ಲದೆ ಇರುವ ಕಡೆ ಅವರನ್ನು ಇಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಕಾರವಾರ ಬಂದರು ಅಭಿವೃದ್ಧಿಯಾಗುವುದಕ್ಕೆ ಮೊದಲನೆಯ ಹಂತವಾಗಿ ಪೋರ್ಟ್ ಆಫೀಸರನ್ನು ಅಲ್ಲಿ ಬದಲಾಯಿಸಿದ್ದು ನಿಜವೇ ?

ಶ್ರೀ ವೀರೇಂದ್ರ ಪಾಟೀಲ್.—ಮೊದಲನೆಯ ಹಂತವೆಂದಲ್ಲ. ಆದರೆ ನಿಜವಾಗಿ ನೋಡಬೇಕಾಗಿದ್ದರೆ ಕಾರವಾರದಲ್ಲಿ ಅವರು ಇರುವುದು ಅತ್ಯವಶ್ಯ. ಮಂಗಳೂರು ಪೋರ್ಟ್ ಕೆಲಸವನ್ನು ಅಲ್ಲಿರುವ ಪೋರ್ಟ್ ಟ್ರಸ್ಟ್ ನೋಡಿಕೊಳ್ಳುತ್ತದೆ. ಅದಕ್ಕಾಗಿ ಅವರನ್ನು ಕಾರವಾರಕ್ಕೆ ವರ್ಗಾಯಿಸಬೇಕೆಂದು ನಿರ್ಧರ ಮಾಡಿದ್ದೇವೆ.

ಶ್ರೀ ಪಿ. ಎ. ಐತಾಳ.—ಪಣಂಬೂರು ಬಂದರು ಆದಮೇಲೆ ಈಗಿರುವ ಮಂಗಳೂರು ಬಂದರು ಹಾಗೆಯೇ ಉಳಿಯುತ್ತದೆ. ಅದನ್ನು ಉತ್ತಮಪಡಿಸುವ ಯೋಜನೆ ಇದೆ. ಆದ್ದರಿಂದ ಆ ಕೆಲಸವನ್ನು ನೋಡಿಕೊಳ್ಳಲು ಪೋರ್ಟ್ ಆಫೀಸರು ಅಲ್ಲಿಯೇ ಇರುವುದು ಅವಶ್ಯಕವಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಪದೇ ಪದೇ ಹೇಳುತ್ತಿದ್ದೇನೆ. ಮಂಗಳೂರು ಬಂದರಿಗೂ, ಈಗಿರುವ ಸ್ಟೇಟ್ ಪೋರ್ಟ್ ಆಫೀಸರಿಗೂ ಸಂಬಂಧವಿಲ್ಲ. ಮಂಗಳೂರು ಪೋರ್ಟ್ ಮಂಗಳೂರು ಪೋರ್ಟ್ ಟ್ರಸ್ಟ್‌ನವರ ಆಡಳಿತದಲ್ಲಿದ್ದು ಅವರೇ ಅದನ್ನು ನೋಡಿಕೊಂಡು ಹೋಗುತ್ತಾರೆ ಮತ್ತು ಮೇಜರ್ ಮಂಗಳೂರು ಪೋರ್ಟ್ ಆದರೂ ಕೂಡ ಈಗಿರುವ ಪೋರ್ಟ್ ಅದರಲ್ಲಿ ಮರ್ಜ್ ಆಗುತ್ತದೆ ಎಂದು ನನಗನಿಸುತ್ತದೆ.

ಉಪಾಧ್ಯಕ್ಷರು.—ಅಲ್ಪ ಕಾಲಾವಧಿ ಪ್ರಶ್ನೆ ಮುಗಿಯಿತು.

QUESTIONS FOR ANSWERS ON THE DAY

(but not taken up)

Co-operative Societies in Tumkur

340. **Sri B. P. GANGADHAR** (Tumkur).—

Will the Minister for Development and Co-operation be pleased to state :—

(*a*) the total number of co-operative societies started in Tumkur Taluk and also in Tumkur District;

(*b*) how many of them have been working at present ;

(*c*) is it a fact that large amounts of these societies have been misappropriated ;

(*d*) the amount that has been misappropriated and the amount recovered ;

(*e*) the action taken by Government in the matter of recovering the money ?

A.—**Sri P. M. NADGOUDA** (Minister for Development and Co-operation).—

(*a*) (i) Tumkur Taluk ... 161
(ii) Tumkur District ... 1,037

(*b*) (i) Tumkur Taluk ... 129
(ii) Tumkur District ... 754

(*c*) Certain amounts have been misappropriated in some societies.

(*d*) (i) Amount misappropriated ... Rs. 3,43,802-45.
(ii) Amount recovered ... Rs. 57,830-49.

(*e*) Appropriate civil and criminal action is being taken for recovery of the money from the delinquents.